ಅಧ್ಯಕ್ಷರು:– ಇದು ಸುಳ್ಯಾಕ್ಕೆ ಸಂಬಂಧಪಟ್ಟಿದ್ದು. ಇನ್ನು ಆರು ಪ್ರಶ್ನೆಗಳು ಬಾಕಿ ಇವೆ. ಹೀಗಾದರೆ ಹೇಗೆ ಮುಗಿಸುವುದು?

ಶ್ರೀ ಹೆಚ್.ಸಿ. ಬಸವರಾಜ್:– ಈಗ ಮಂಜೂರಾಗಿರುವ ಕ್ರೀಡಾಂಗಣಗಳನ್ನು ಬೇಗ ಮುಗಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಆ ಬಗ್ಗೆ ಮಾನ್ಯ ಕ್ರೀಡಾ ಸಚಿವರನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಪ್ರೊ।। ಬಿ.ಕೆ. ಚಂದ್ರಶೇಖರ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ್ದೇನೆ. ಸಂಪನ್ಮೂಲದ ಕೊರತೆಯಿದೆ. ಈ ತೊಂದರೆ ಇವತ್ತಿನದಲ್ಲ. ಇದು ಕಳೆದ 10 ವರ್ಷಗಳಿಂದ ಇದೆ. ಮಾನ್ಯ ಮಲ್ಲಿಕಾರ್ಜುನರವರು ಕೇಂದ್ರಕ್ಕೆ ಹೋಗಿ ಚರ್ಚೆ ಮಾಡಿ ಅವರಿಂದ ಹೆಚ್ಚು ಹಣವನ್ನು ತರುವ ಪ್ರಯತ್ನವನ್ನು ಮಾಡಲಿಕ್ಕೆ ಈ ತಿಂಗಳ ಮೂರನೆಯ ವಾರ ಅಥವಾ ಮಧ್ಯಭಾಗದಲ್ಲಿ ಹೋಗಲಿಕ್ಕೆ ತಯಾರಿ ನಡೆದಿದ್ದು, ಆದರೆ ಅಧಿವೇಶನ ಪ್ರಾರಂಭವಾದುದರಿಂದ ಅದು ಮುಂದಕ್ಕೆ ಹೋಗಿದೆ. ಅಧಿವೇಶನ ಮುಗಿದ ಮೇಲೆ ಅವರು ಹೋಗುತ್ತಾರೆ. ರಾಜ್ಯ ಬಜೆಟ್‌ನಲ್ಲಿ ಇದಕ್ಕಾಗಿ ಹೆಚ್ಚು ಹಣವನ್ನು ಒದಗಿಸಿದರೆ ಖಂಡಿತಾ ಮಾಡಬಹುದು. ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಈ ಬಗ್ಗೆ ಮಾನ್ಯ ಸಚಿವರು ಕಾಳಜಿ ತೋರಿಸಬೇಕು. ಇದು 15 ವರ್ಷಗಳ ಹಿಂದಿನ ಕಾರ್ಯಕ್ರಮ.

ಪ್ರೊ।। ಬಿ.ಕೆ. ಚಂದ್ರಶೇಖರ್:– ನಾನು ಹೇಳುವುದು ಕೇಳಿ. ಒಂದು ಪರ್ಸೆಂಟ್ ಹಣವನ್ನು ಎಲ್ಲಾ ಜಿಲ್ಲಾ ಪಂಚಾಯಿತಿಗಳು ಬಜೆಟ್‌ನಲ್ಲಿ ಕ್ರೀಡಾಅಭಿವೃದ್ಧಿಗೆ ಎಂದು ತೆಗೆದು ಇಟ್ಟರೆ ಆ ಒಂದು ಪರ್ಸೆಂಟ್ ಹಣದಲ್ಲೇ ಇವುಗಳನ್ನೆಲ್ಲಾ ಮಾಡಿ ಮುಗಿಸಬಹುದು.

ಶ್ರೀ ಎನ್. ಸಂಪಂಗಿ:– ಮಾನ್ಯ ಅಧ್ಯಕ್ಷರೆ, ಇದು ಕ್ರೀಡೆಗೆ ಸಂಬಂಧಪಟ್ಟಂತಹ ವಿಚಾರ. ಈ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು:– ನೀವು ಬರೆದು ಕಳುಹಿಸಿ.

ತಿರುಪತಿ-ತಿರುಮಲ ದೇವಾಲಯದ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಸರ್ಕಾರದ ಹೋಟೆಲ್‌ಗಳ ಸಂಖ್ಯೆ

70(744) ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ತಿರುಪತಿ ತಿರುಮಲ ದೇವಾಲಯದ ವ್ಯಾಪ್ತಿಯಲ್ಲಿರುವ ಕರ್ನಾಟಕ ಸರ್ಕಾರದ ಕರ್ನಾಟಕ ಚೌಲ್ಟ್ರಿಯ ಮತಿಯಿಂದ ನಡೆಸುತ್ತಿರುವ ಹೋಟೆಲ್‌ಗಳ ಸಂಖ್ಯೆ ಎಷ್ಟು; ಈ ಹೋಟೆಲುಗಳನ್ನು ಯಾವ ಯಾವ ಫಲಾನುಭವಿಗಳಿಗೆ ನೀಡಲಾಗಿದೆ; ಅವರಿಗೆ ಯಾವ ಆಧಾರದ ಮೇಲೆ ಅಂದರೆ ಗುತ್ತಿಗೆ ಆಧಾರದ ಮೇಲೆಯೇ ಅಥವಾ ಬಾಡಿಗೆಯಾದಾರದ ಮೇಲೆಯೇ ನೀಡಲಾಗಿದೆ; ವಿವರ ಒದಗಿಸುವುದು?

2. ಬಾಡಿಗೆಯಾದಾರದ ಮೇಲೆ ಒದಗಿಸಿದ್ದರೆ ಪ್ರತಿ ಮಾಹೆಯಾನ ಪಡೆಯುವ ಹೋಟೆಲ್‌ಗಳ ಬಾಡಿಗೆ ಎಷ್ಟು; ಈ ಬಾಡಿಗೆಯ ಹಣವನ್ನು ಯಾವ ಯಾವ ಕಾರ್ಯಗಳಿಗೆ ವಿನಿಯೋಗಿಸಲಾಗುವುದು; ವಿವರ ಒದಗಿಸುವುದು?

3. ಕರ್ನಾಟಕ ರಾಜ್ಯ ಸರ್ಕಾರದ ಸ್ವಾಧೀನದಲ್ಲಿರುವ ತಿರುಪತಿ ತಿರುಮಲ ದೇವಾಲಯದ ಸಂಪೂರ್ಣ ಆಸ್ತಿ ವಿವರವನ್ನು ಒದಗಿಸುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

1. ತಿರುಮತಿ ತಿರುಮಲ ಕರ್ನಾಟಕ ರಾಜ್ಯಛತ್ರದ ವತಿಯಿಂದ ಸರ್ಕಾರವು ಹೋಟೆಲ್‌ಗಳನ್ನು ನಡೆಸುತ್ತಿಲ್ಲ. ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಕಲ್ಯಾಣ ಮಂಟಪದ ನೆಲಮಹಡಿಯಲ್ಲಿರುವ ಕಟ್ಟಡವನ್ನು ಶ್ರೀ ಕೆ. ರಾಮ್ ಮೋಹನರಾವ್ ಎಂಬುವವರಿಗೆ ಹೋಟೆಲ್ ನಡೆಸಲು ದಿನಾಂಕ 1-9-1994 ರಿಂದ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ 31-8-99ಕ್ಕೆ ಮುಕ್ತಾಯವಾಗಿದೆ.

2. ಧಾರ್ಮಿಕದತ್ತಿ ಆಯುಕ್ತರ ಆದೇಶದಂತೆ ಮೊದಲ ವರ್ಷ ಮಾಸಿಕ ರೂ. 9,000-00 ಬಾಡಿಗೆ ನಂತರ ಪ್ರತಿ ವರ್ಷ ಶೇಕಡ 5 ರಷ್ಟು ಹೆಚ್ಚಿಗೆ ಪಾವತಿ ಮಾಡಲು ನಿಗದಿಯಾಗಿದೆ. ಬಾಡಿಗೆಯಿಂದ ಬಂದ ಹಣವನ್ನು ಛತ್ರದ ನಿರ್ವಹಣೆಗೆ ಉಪಯೋಗಿಸಲಾಗುತ್ತದೆ.

3. ಕರ್ನಾಟಕ ರಾಜಛತ್ರ ತಿರುಪತಿ ತಿರುಮಲದ ಸ್ವಾಧೀನದಲ್ಲಿರುವ ಆಸ್ತಿಯ ವಿವರ ಈ ಕೆಳಕಂಡಂತೆ ಇದೆ.

1. ಕರ್ನಾಟಕ ರಾಜ್ಯಛತ್ರ, ತಿರುಮಲ ಒಟ್ಟು 7.60 ಎಕರೆ

2. ತಿರುಚಾನೂರಿನಲ್ಲಿ 7234-50 ಚದರಡಿ ವಿಸ್ತೀರ್ಣದ ಛತ್ರ

3. ತಿರುಪತಿಯಲ್ಲಿ 1) 30181 ಚದರಡಿ ವಿಸ್ತೀರ್ಣದ ಛತ್ರ

2) 2100 ಚದರಡಿ ವಿಸ್ತೀರ್ಣದ ಚದರಡಿ ಕಟ್ಟಡ

ಶ್ರೀ ಎನ್. ಸಂಪಂಗಿ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ತಿರುಪತಿಯಲ್ಲಿ ಮತ್ತು ತಿರುಮಲದಲ್ಲಿರತಕ್ಕ ಹೋಟೆಲ್‌ಗಳು ಎಷ್ಟೆಂದು ಪ್ರಶ್ನೆ ಕೇಳಿದ್ದೇನೆ. ಅದರಲ್ಲಿ ಕರ್ನಾಟಕ ರಾಜ್ಯ ಛತ್ರದಲ್ಲಿ ನಡೆಯತಕ್ಕ ಒಂದೇ ಒಂದು ಹೋಟೆಲ್‌ನ ವಿಚಾರವನ್ನು ತಿಳಿಸಿದ್ದಾರೆ. ದಿನಾಂಕ 1-4-1994 ರಿಂದ ಐದು ವರ್ಷಗಳ ಅವಧಿಯ ಗುತ್ತಿಗೆಗೆ ನೀಡಲಾಗಿದೆಯೇ ಆ ಗುತ್ತಿಗೆಯ ಅವಧಿ 1999ಕ್ಕೆ ಮುಗಿದಿದೆ ಎಂದು ತಿಳಿಸಿದ್ದಾರೆ. 1999ಕ್ಕೆ ಮುಗಿದಿದ್ದರೂ ಕೂಡ ಇವತ್ತಿನವರೆಗೆ ಅದರ ಬಗ್ಗೆ ಟೆಂಡರ್ ಕರೆದಿಲ್ಲ. ಅದೇ ತರಹ ಇನ್ನೊಂದು ಫಾಸ್ಟ್‌ಫುಡ್ ಹೋಟೆಲ್ ಆ ಛತ್ರದಲ್ಲಿಯೇ ಪ್ರಾರಂಭ ಮಾಡಿದ್ದಾರೆ. ಅದರಲ್ಲಿ ಒಂದು ದಿವಸಕ್ಕೆ 20 ರಿಂದ 25 ಸಾವಿರ ರೂಪಾಯಿಗಳ ವ್ಯಾಪಾರವಾಗುತ್ತದೆ. ಅಲ್ಲಿ ಫಾಸ್ಟ್‌ಫುಟ್ ಹೋಟೆಲ್ ಪ್ರಾರಂಭ ಮಾಡಿದ್ದರೂ ಕೂಡ ಅದನ್ನು ತಿಳಿಸಿಲ್ಲ. ವೈಕುಂಠ ಹೋಟೆಲ್ ವಿಚಾರದಲ್ಲಿ ಇವತ್ತಿನವರೆಗೆ ಟೆಂಡರ್ ಕರೆದಿಲ್ಲ, ಟೆಂಡರ್ ಕರೆಯುವುದಕ್ಕೆ ಆಗುತ್ತಿಲ್ಲ. ಇದರಿಂದ ಲಕ್ಷಾಂತರ ರೂಪಾಯಿಗಳು, ಕೋಟ್ಯಾಂತರ ರೂಪಾಯಿಗಳ ಹಣ ಸರ್ಕಾರಕ್ಕೆ ಲುಕ್ಸಾನು ಆಗುತ್ತಿದೆ. ಎರಡು ವರ್ಷ ತೋರಿಸುವುದಕ್ಕೆ ಬದಲಾಗಿ ಒಂದು ವರ್ಷ ತೋರಿಸಿದ್ದಾರೆ. 1999ಕ್ಕೆ ಗುತ್ತಿಗೆಯ ಅವಧಿ ಮುಗಿದಿದ್ದರೂ ಇವತ್ತಿನವರೆಗೆ ಟೆಂಡರ್ ಕರೆದಿಲ್ಲ. ಈ ಬಗ್ಗೆ ಇನ್ನೊಂದು ಪ್ರಶ್ನೆ ಏನೆಂದರೆ, ಕೇವಲ 9 ಸಾವಿರ ರೂಪಾಯಿಗಳಿಗೆ ಬಾಡಿಗೆ ಕೊಟ್ಟಿದ್ದಾರೆ.

ಇವತ್ತು 4 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಮುಂದೆ ಬಂದರೂ, ಗುತ್ತಿಗೆ ರದ್ದಾಗಿದ್ದರೂ ಟೆಂಡರ್ ಕರೆಯದಿರುವುದಕ್ಕೆ ಕಾರಣವೇನು?

ಅಧ್ಯಕ್ಷರು:– ಮಾನ್ಯ ಸದಸ್ಯರು ಒಂದೆರಡು ಪ್ರಶ್ನೆ ಕೇಳಿ.

ಶ್ರೀಮತಿ ಸುಮಾ ವಂಸತ್ :– ಮಾನ್ಯ ಅಧ್ಯಕ್ಷರೆ, ಕಟ್ಟಡವನ್ನು ಗುತ್ತಿಗೆಗೆ ನೀಡಲಿಕ್ಕೆ ಟೆಂಡರ್ ಕರೆಯಲಿಕ್ಕೆ ನಿಯಮಾನುಸಾರವಾಗಿ ಕ್ರಮವನ್ನು ಕೈಗೊಳ್ಳಲಾಗಿದೆ.

ಶ್ರೀ ಎನ್. ಸಂಪಂಗಿ:– ಒಂದೇ ಸಾರಿ ಪ್ರಶ್ನೆ ಕೇಳಿದರೆ ಒಳ್ಳೆಯದಲ್ಲವೆ?

ಅಧ್ಯಕ್ಷರು:– ಆ ಮೇಲೆ ಒಂದೆರಡು ಪ್ರಶ್ನೆ ಕಳಿ, ಇನ್ನೊಂದು ಚಾನ್ಸ್ ಕೊಡುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಯಾತ್ರಾರ್ಥಿಗಳು ಅಥವಾ ಯಾರಾದರೂ ತಿರುಪತಿಗೆ ಹೋಗಿದ್ದರೆ ಪ್ರಶ್ನೆ ಕೇಳಬಹುದು. ಅಲ್ಲಿಗೆ ಹೋದವರೆಲ್ಲರಿಗೂ ಸ್ವಾರಸ್ಯಕರ ಸಂಗತಿಗಳು ಅನುಭವಕ್ಕೆ ಬಂದಿವೆ. ಅದು ಏನೆಂದರೆ ಪೂರ್ ಮೈಂಟೆನೆನ್ಸ್, ವರ್ಸ್ಟ್ ಮೈಂಟೆನೆನ್ಸ್. ಅಂದರೆ ಅಲ್ಲಿಗೆ ಹೋದವರು ದಯವಿಟ್ಟು ಈ ಕರ್ನಾಟಕ ಛತ್ರ ಬೇಡ ಎನ್ನುತ್ತಾರೆ. ಅದು ಏಕೆ ಎಂದರೆ ಬಹಳ ಕೆಟ್ಟ ನಿರ್ವಹಣೆ. ಹಿಂದೆ ನಲ್ವತ್ತು ಜನರ ಒಂದು ಸಲಹಾ ಸಮಿತಿಯನ್ನು ಹಿಂದಿನ ಮಂತ್ರಿಗಳು ಮಾಡಿದ್ದರು. ಅದು ಹೇಗೆ ಎಂದರೆ, ಯಾರಾದರೂ ತಿರುಪತಿಯಲ್ಲಿ ಇಂತಹ ಅನ್ಯಾಯವಾಗಿದೆ ಎಂದರೆ, ನಿನ್ನ ಹೆಸರು ಕೊಡು ಎಂದು ಅಂತಹವರನ್ನು ಸೇರಿಸಿಕೊಂಡು ಒಂದು ಸಲಹಾ ಸಮಿತಿ ಎಂದು ಮಾಡಿದರು. ಅದರದ್ದು ಒಂದು ಮೀಟಿಂಗ್ ಇಲ್ಲ, ಏನೂ ಇಲ್ಲ. ಸುಮ್ಮನೆ ಸಲಹಾ ಸಮಿತಿ ಎಂದು ಮಾಡಿದರು. ಕೊನೆಗೆ ತಿರುಪತಿಯಲ್ಲಿ ವೆಂಕಟರಮಣಸ್ವಾಮಿ ದರ್ಶನಕ್ಕೆ ಹೋದವರು ಎಂತಹ ಛತ್ರವನ್ನು ಇಲ್ಲಿ ಕರ್ನಾಟಕದಿಂದ ಕಟ್ಟಿಸಿದ್ದಾರೆ ಎಂದು ಹೇಳುವಂತಾಗಿದೆ. ಬಹಳ ಕೆಟ್ಟ ನಿರ್ವಹಣೆ, ವ್ಯವಸ್ಥೆ ಅಲ್ಲಿರುವಂಥಾದ್ದು. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದನ್ನು ಹೋಗಿ ನೋಡಿದ್ದಾರೆ. ಅವರು ಆಸಕ್ತಿ ತೆಗೆದುಕೊಂಡು ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಅಲ್ಲಿ ಆಂಧ್ರಪ್ರದೇಶದವರು ನಮ್ಮವರನ್ನು ಒಳಗಡೆಗೆ ಬಿಡುತ್ತಿಲ್ಲ ಎಂದು ಹೇಳಿದರು. ಇದರ ಬಗ್ಗೆ ರಿಟ್ ಪಿಟಿಷನ್ ಹಾಕಿ ಡೈರೆಕ್ಷನ್ ಕೂಡ ಆಗಿದೆ. ಆದರೂ ಕೂಡ ಅಲ್ಲಿ ಬಹಳ ಪೂರ್ ಮೈಂಟೆನೆನ್ಸ್ ಇದೆ. ಈಗ ಈ ಇಲಾಖೆಯ ಮಂತ್ರಿಗಳ ಬದಲಾವಣೆಯಾಯಿತು. ಶ್ರೀಮತಿ ಸುಮಾ ವಸಂತ್ ಅವರು ಈಗ ಮಂತ್ರಿಯಾಗಿ ಬಂದಿದ್ದಾರೆ. ಆದರೆ ತಿರುಪತಿಯ ಕರ್ನಾಟಕ ರಾಜ್ಯ ಛತ್ರ ಮಾತ್ರ ಬದಲಾವಣೆಯಾಗಿಲ್ಲ. ಅದರ ಪರಿಸ್ಥಿತಿ ಹಾಗೆಯೇ ಇದೆ. ಅಲ್ಲಿ ಕೊಠಡಿಗಳಲ್ಲಿ ತಿಗಣೆ, ಸೊಳ್ಳೆ ಕಾಟ ಇದೆ. ಬೆಡ್‌ಶೀಟ್‌ಗಳನ್ನು ಬದಲಾವಣೆ ಮಾಡುವುದಿಲ್ಲ. ಯಾರು ಹೋದರೂ ಕೂಡ ಅದೊಂದು ನರಕವಾಗಿದೆ.

ಅಧ್ಯಕ್ಷರು:– ನೀವು ಹೋಗಿದ್ದೀರಾ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ಅಲ್ಲಿ ಎಲ್ಲಾ ಛತ್ರಗಳನ್ನು ನೋಡಿದ್ದೇನೆ. ನಮ್ಮ ಅನೇಕ ಎಂ.ಎಲ್.ಎ. ಗಳು ಬಂದಿದ್ದರು.

ಅಧ್ಯಕ್ಷರು:– ನೀವು ಪ್ರಶ್ನೆ ಕೇಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಏಕೆಂದರೆ ಆಂಧ್ರ ಪ್ರದೇಶದಲ್ಲಿ ಒಂದು ಸಲಹಾ ಸಮಿತಿ ಇದೆ.

ಆ ಟ್ರಸ್ಟ್‌ನಲ್ಲಿ ನಮ್ಮವರು ಮಾತ್ರ ಇಲ್ಲ. ಅಲ್ಲಿ ನಮ್ಮವರು ಒಬ್ಬರನ್ನು ಟ್ರಸ್ಟಿಯಾಗಿ ನೇಮಿಸುವಂತಾಗಬೇಕು. ನಮ್ಮವರು ಯಾರನ್ನೂ ಅವರು ಅಪಾಯಿಂಟ್ ಮಾಡಿಲ್ಲ. ಮತ್ತೊಂದು ಪ್ರಶ್ನೆ ಏನೆಂದರೆ, ಕರ್ನಾಟಕ ರಾಜ್ಯ ಸರ್ಕಾರದ ಸ್ವಾಧೀನದಲ್ಲಿರತಕ್ಕಂಥ ತಿರುಪತಿ-ತಿರುಮಲ ದೇವಸ್ಥಾನ ಸಂಪೂರ್ಣ ಆಸ್ತಿ ವಿವರಗಳನ್ನು ಕೇಳಿದಾಗ ಒಂದು ಮಾತ್ರ ಕೊಟ್ಟಿದ್ದೀರಿ. ಆದರೆ ಮೂವೆಬಲ್ ಆಸ್ತಿ ಏನೆಂಬ ವಿವರಗಳನ್ನು ಕೊಟ್ಟಿಲ್ಲ. ಹಿಂದೆ ನಮ್ಮ ಮಹಾರಾಜರು ಕೊಟ್ಟಿರತಕ್ಕಂಥ ಆಭರಣಗಳು ಇತ್ಯಾದಿ ಏನಿವೆ, ಅವುಗಳ ವಿವರಗಳನ್ನು ಕೂಡ ಕೊಡಬೇಕು.

ಅಧ್ಯಕ್ಷರು:- ನೋಡಿ, ನೀವು ಒಬ್ಬರೇ ಮೂರು ಪ್ರಶ್ನೆಗಳನ್ನು ಕೇಳಿದರೆ ಹೇಗೆ? ಇನ್ನೂ ಐದು ಪ್ರಶ್ನೆಗಳು ನಮ್ಮ ಮುಂದಿವೆ. ಅಲ್ಲಿ ಸರಿಯಾಗಿ ಮೈಂಟೇನ್ ಮಾಡುವುದಕ್ಕೆ ಏನು ಮಾಡಬೇಕೆಂದು ಅಷ್ಟು ಮಾತ್ರ ಕೇಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಒಂದೇ ಒಂದು ಪ್ರಶ್ನೆ ಎಂದರೆ, ನಮ್ಮವರು ಹೋದಾಗ ಎಂಟರೆನ್ಸ್‌ನಲ್ಲಿಯೇ ಭಾತ್‌ರೂಮ್ ಹಾಕಿ ಬಿಟ್ಟಿದ್ದಾರೆ.

ಅಧ್ಯಕ್ಷರು:- ನೇರವಾಗಿ ಉಪಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಆದ್ದರಿಂದ ಮುಖ್ಯಮಂತ್ರಿಗಳು ಏನಾದರೂ ಒಂದು ಸರಿಯಾದ ವ್ಯವಸ್ಥೆ ಮಾಡಬೇಕು. ಏಕೆಂದರೆ ಪಾಪ, ಮೇಡಂ ಅವರು ಏನು ಮಾಡುತ್ತಾರೆ? ಅವರು ಎಷ್ಟು ಸಲ ಹೋಗಿ ಬಂದೂ ಬದಲಾವಣೆ ಏನೂ ಅಲ್ಲಿ ಆಗಿಲ್ಲ.

ಅಧ್ಯಕ್ಷರು:- ಸ್ವಲ್ಪ ತಡೆಯಿರಿ. ಮಂತ್ರಿಗಳು ಉತ್ತರ ಹೇಳಲಿ.

ಶ್ರೀಮತಿ ಸುಮಾ ವಸಂತ್:- ಸನ್ಮಾನ್ಯ ಅಧ್ಯಕ್ಷರೇ, ನಾನು ಅಲ್ಲಿಗೆ ಹೋಗಿ ನೋಡಿ ಬಂದ ನಂತರ ನಾವು ಅಲ್ಲಿ ಒಬ್ಬ ಪೂರ್ಣ ಪ್ರಮಾಣದ ಅಧಿಕಾರಿಯನ್ನು ಈಗಾಗಲೇ ಪೋಸ್ಟ್ ಮಾಡಿದ್ದೇವೆ ಮತ್ತು ಈ ವಿಚಾರವನ್ನು ಅಲ್ಲಿಯ ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ತಂದು, ಈಗಾಗಲೇ ಪರಿಸ್ಥಿತಿ ಬಗ್ಗೆ ಸಂಪೂರ್ಣವಾದ ಕಾರ್ಯಕ್ರಮವನ್ನು ನಾವು ರೂಪಿಸಿ ಕೊಂಡಿದ್ದೇವೆ. ಈಗಾಗಲೇ ಕೆಲವಂಶ ಅನುದಾನವನ್ನೂ ಕೂಡ ಬಿಡುಗಡೆ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ....

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರು ನಿಂತುಕೊಂಡು ಕೇಳಿದಾಗ ಅವರಿಗೆ ಅವಕಾಶ ಕೊಡಬೇಕಾದದ್ದು ನನ್ನ ಕರ್ತವ್ಯ.

ಶ್ರೀ ಬಿ.ಆರ್. ಯಾವಗಲ್:- ಈ ಕಡೆಗೂ ಸ್ವಲ್ಪ ನೋಡಿ.

ಅಧ್ಯಕ್ಷರು:- ನಿಮಗೂ ಅವಕಾಶ ಕೊಡುತ್ತೇನೆ. ಇದು ತಿರುಪತಿಯ ಶ್ರೀ ವೆಂಕಟ ರಮಣಸ್ವಾಮಿ ಮೇಲೆ ಪ್ರಶ್ನೆ ಇರುವುದರಿಂದ ಎಲ್ಲರಿಗೂ ಅವಕಾಶ ಕೊಡುತ್ತೇನೆ. You don't worry. ಇದು ದೇವರ ಬಗ್ಗೆ ಪ್ರಶ್ನೆ ಇರುವುದರಿಂದ ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ತಿರುಪತಿ ವೆಂಕಟರಮಣ ಎಲ್ಲರಿಗೂ ಒಳ್ಳೆಯದು ಮಾಡಲಿ. ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಅಂಶವನ್ನು ನಾನು ಸಭೆಯ ಗಮನಕ್ಕೆ ತರುವುದು

ಏನೆಂದರೆ, 16-12-1999ಕ್ಕೆ ಲೀಸ್ ಏನು ಕೊಟ್ಟಿದ್ದಾರೆ ಅದರ ಪೀರಿಯಡ್ ಮುಗಿಯಿತು. ಲೀಸ್ ಪೀರಿಯಡ್ ಮುಗಿದ ಮೇಲೆ ಅದನ್ನು ಮತ್ತೆ ರಿನ್ಯೂಯಲ್ ಮಾಡುವುದಕ್ಕೆ ಅಥವಾ ಹೊಸದಾಗಿ ಯಾರಿಗಾದರೂ ಕೊಡಬೇಕಾದರೆ ನೀವು ಟೆಂಡರ್ ಕೆರಯಬೇಕಾಗಿತ್ತು. ಇಲ್ಲಿಯವರೆಗೂ ಅದನ್ನು ಕರೆದಿಲ್ಲ. ಈ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ ಎಂದು ತಾವು ಹೇಳಿದ್ದೀರಿ. ಆದರೆ ಎರಡು ವರ್ಷಗಳಾಯಿತು, ಇಲ್ಲಿಯವರೆಗೂ ಈ ಪ್ರಕ್ರಿಯೆ ಏಕೆ ಮಾಡಲಿಲ್ಲ? ಇನ್ನೊಂದು ಅಂಶ ಏನೆಂದರೆ, ನನಗೆ ಬಂದ ಮಾಹಿತಿ ಪ್ರಕಾರ ಹಿಂದಿನ ಮುಜರಾಯಿ ಸಚಿವರು ಯಾರು ಇದ್ದರು ಅವರು ಮತ್ತು ಹಿಂದಿನ ಸಂಬಂಧಪಟ್ಟ ಅಧಿಕಾರಿಗಳು ಶ್ರೀ ಕೃಷ್ಣಭಟ್ ಅನ್ನುವವರಿಗೆ ಇದನ್ನು ಪ್ರತಿ ತಿಂಗಳೂ ಹದಿನೈದು ಸಾವಿರ ರೂಪಾಯಿಗಳಿಗೆ ಲೀಸ್ ಮೇಲೆ ಕೊಟ್ಟಿದ್ದಾರೆ. ಅದರ ಬಗ್ಗೆ ಆಫ್ಲೈನ್‌ಯಾಗಿದೆ ಎನ್ನುವಂಥ ಮಾಹಿತಿ ನನಗೆ ಇದೆ. ಅದು ಸರಿಯೇನು? ಅಮೇಲೆ ಧಾರ್ಮಿಕ ದತ್ತಿ ಆಯುಕ್ತರು ಇದನ್ನು ಪ್ರತಿ ತಿಂಗಳೂ 75 ಸಾವಿರ ರೂಪಾಯಿಗಳಿಗೆ ಲೀಸ್ ಮೇಲೆ ಕೊಡಬೇಕು ಎಂದು ಅವರು ಶಿಫಾರಸ್ಸು ಮಾಡಿದ್ದರು. ಆದರೆ ಹಿಂದಿನ ಸಚಿವರು ಕೇವಲ ಪ್ರತಿ ತಿಂಗಳೂ 15 ಸಾವಿರ ರೂಪಾಯಿಗಳಿಗೆ ಇದನ್ನು ಕೃಷ್ಣಭಟ್ ಎನ್ನುವವರಿಗೆ ಲೀಸ್ ಮೇಲೆ ಕೊಟ್ಟಿದ್ದಾರೆ ಎನ್ನುವಂಥಾದ್ದು ಮಾಹಿತಿ ಇದೆ. ಇದರ ಬಗ್ಗೆ ದಯವಿಟ್ಟು ಸ್ಪಷ್ಟೀಕರಣ ಕೊಡಬೇಕು ಮತ್ತು ಇಲ್ಲಿಯವರೆಗೆ ಟೆಂಡರ್ ಏಕೆ ಆಗಿಲ್ಲವೆನ್ನುವುದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು.

ಶ್ರೀ ಎಂ.ಎಸ್. ಆತ್ಮಾನಂದ:- ಆಸ್ತಿ ವಿವರಗಳನ್ನು ಸದನದ ಮುಂದೆ ಕೊಟ್ಟಿದ್ದಾರೆ. ಈ ಆಸ್ತಿಯಲ್ಲಿ ನಮ್ಮ ಸರ್ಕಾರದ ಸ್ವಾಧೀನದಲ್ಲಿ ರಾಜ್ಯಛತ್ರ, ತಿರುಮಲ, ತಿರುಚಾನೂರು ಮತ್ತು ತಿರುಪತಿಯಲ್ಲಿ ಎಷ್ಟಿದೆ ಎನ್ನತಕ್ಕದ್ದನ್ನು ಹೇಳಬೇಕು. ಈ ಸೌಲಭ್ಯಗಳನ್ನು ಯಾತ್ರಾರ್ಥಿಗಳಿಗೆ ಒದಗಿಸತಕ್ಕಂಥ ದೃಷ್ಟಿಯಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೂ ಮತ್ತು ಟಿ.ಟಿ.ಡಿ. ಬೋರ್ಡಿಗೂ ಕೂಡ ಈ ಜಮೀನು ವಿವಾದ ಇತ್ತು. ಆದ್ದರಿಂದ ಯಾವುದೇ ಸೌಲಭ್ಯ ಒದಗಿಸುವ ಕಾಮಗಾರಿಗಳಿಗೆ ಅಲ್ಲಿಯ ಟಿಟಿಡಿ ಬೋರ್ಡ್‌ನವರು ಅನುಮತಿಯನ್ನು ಕೊಡದೇ ಇದ್ದುದ್ದರಿಂದ, ನಾವು ಸೌಲಭ್ಯಗಳನ್ನು ಒದಗಿಸಲಿಕ್ಕೆ ಸಾಧ್ಯವಾಗಿಲ್ಲ. ಇದನ್ನು ಸರಿಪಡಿಸಲು ಅಥವಾ ಜಮೀನು ವಿವಾದವನ್ನು ಸರಿಪಡಿಸಲು ನಮ್ಮ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಯಾವ ಸೌಲಭ್ಯಗಳನ್ನು ನೀಡುತ್ತಿದ್ದೀರಿ ಎಂದು ತಮ್ಮ ಮೂಲಕ ಮಾನ್ಯ ಸಚಿವೆಯವರನ್ನು ನಾನು ಕೇಳುತ್ತೇನೆ.

ಶ್ರೀಮತಿ ಸುಮಾ ವಂಸತ್:- ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಛತ್ರ ತಿರುಮಲ-ತಿರುಪತಿ ಸ್ವಾಧೀನದಲ್ಲಿರುವ ಆಸ್ತಿಯ ವಿವರ ಕೆಳಕಂಡಂತಿದೆ. ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ತಿರುಮಲದಲ್ಲಿ ಒಟ್ಟು ವಿಸ್ತೀರ್ಣ 7.60 ಎಕರೆ ಇದೆ. ಪ್ರಸ್ತುತ ಜಾಗದ ಒಡೆತನದ ಬಗ್ಗೆ ಟಿಟಿಡಿ ಯೊಂದಿಗೆ ವಿವಾದ ಇರುತ್ತದೆ. ಕರ್ನಾಟಕ ರಾಜ್ಯಛತ್ರ ತಿರುಮಲದಲ್ಲಿ ಪ್ರವಾಸಿಗರಿಗೆ ಇರುವ ವಸತಿ ಸೌಕರ್ಯಗಳ ಬಗ್ಗೆ ವಿವರಗಳು ಈ ಕೆಳಕಂಡಂತಿರುತ್ತವೆ. ಒಟ್ಟು 17 ಕಾಟೇಜ್‌ಗಳು 50 ಕೊಠಡಿಗಳನ್ನು ಒಳಗೊಂಡಿರುತ್ತದೆ. ಕರ್ನಾಟಕ ಕಲ್ಯಾಣ ಮಂಟಪ-24 ಕೊಠಡಿಗಳು ಮತ್ತು ಒಂದು ಕಲ್ಯಾಣ ಮಂಟಪವನ್ನು ಒಳಗೊಂಡಿರುತ್ತದೆ. ಅತಿಥಿಗೃಹ-ಎಂಟು ಕೊಠಡಿಗಳು ಮತ್ತು ಪರಿವೀಕ್ಷಣೆ ಮಂದಿರ-ಎರಡು ಕೊಠಡಿಗಳು. ಪ್ರಸ್ತುತ ಈ ಕೊಠಡಿಗಳು ಲೋಕೋಪಯೋಗಿ ಇಲಾಖೆ, ಹೋಲಾರ ಇವರ ವಶದಲ್ಲಿ ಇರುತ್ತದೆ. ಕರ್ನಾಟಕ ಪ್ರವಾಸಿ ಸೌಧ-ಇಲ್ಲಿ ಇದು 88

ಕೊಠಡಿಗಳನ್ನು ಮತ್ತು ಒಂದು ಕಲ್ಯಾಣ ಮಂಟಪವನ್ನು ಒಳಗೊಂಡಿರುತ್ತದೆ. ಇದರಲ್ಲಿ ಮೊದಲನೇ ಮಹಡಿಯಲ್ಲಿ 38 ಕೊಠಡಿಗಳನ್ನು ಕೆ.ಎಸ್.ಟಿ.ಡಿ.ಸಿ. ಅವರಿಗೆ 15 ವರ್ಷಗಳ ಅವಧಿಗೆ ವರ್ಷಕ್ಕೆ ಬಾಡಿಗೆ 4 ಲಕ್ಷ ರೂಪಾಯಿಯಂತೆ ದಿನಾಂಕ 17-5-97 ರಿಂದ ಗುತ್ತಿಗೆ ನೀಡಲಾಗಿದೆ. ಉಳಿದ 50 ಕೊಠಡಿಗಳು ಕರ್ನಾಟಕ ರಾಜ್ಯಛತ್ರದ ವಶದಲ್ಲಿರುತ್ತವೆ. ತಿರುಚಾನೂರಿನಲ್ಲಿ 7234.50 ಚದರ ಅಡಿ ವಿಸ್ತೀರ್ಣದ ಛತ್ರ ಇದೆ. ತಿರುಪತಿಯಲ್ಲಿ 30,181 ಚದರ ಅಡಿ ವಿಸ್ತೀರ್ಣದ ಛತ್ರ ಮತ್ತು 2100 ಚದರಡಿ ವಿಸ್ತೀರ್ಣದ ಕಟ್ಟಡ ಇದೆ. ಇಷ್ಟು ನಮ್ಮ ತಿರುಪತಿ-ತಿರುಮಲದ ಆಸ್ತಿಯ ವಿವರಗಳು.

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿಯವರೆಗೂ ಟೆಂಡರ್‌ನ್ನು ಏಕೆ ಕರೆಯಲಿಲ್ಲ? ಎರಡು ವರ್ಷಗಳಾಯಿತು. ಕೃಷ್ಣಭಟ್ಟ ಎನ್ನುವವರಿಗೆ ಹಿಂದಿನ ಸಚಿವರು ಈಗಾಗಲೇ ಪ್ರತಿ ತಿಂಗಳಿಗೆ 15 ಸಾವಿರ ರೂಪಾಯಿಗೆ ಲೀಸ್‌ಗೆ ಕೊಟ್ಟಿದ್ದಾರೆ. ಇದು ನಿಜವೇ ಎಂದು ತಿಳಿಸಬೇಕು. ಇದು ಆರ್ಡರ್ ಆಗಿದೆ. ಇದರಲ್ಲಿ ಅವ್ಯವಹಾರ ಆಗಿದೆ. ಈ ಲೀಸ್ ಕೊಟ್ಟಿರುವುದರಲ್ಲಿ ಅವ್ಯವಹಾರ ಆಗಿರುವುದರಿಂದ ಇದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ಇದನ್ನು 75 ಸಾವಿರ ರೂಪಾಯಿಗಳಿಗೆ ಲೀಸ್ ಮೇಲೆ ಕೊಡಬೇಕೆಂದು ಧಾರ್ಮಿಕ ದತ್ತಿ ಆಯುಕ್ತರು ಶಿಫಾರಸ್ಸು ಮಾಡಿದ್ದರು. ಇಂಥಾದ್ದರಲ್ಲಿ ಹಿಂದಿನ ಸಚಿವರು 15 ಸಾವಿರ ರೂಪಾಯಿಗಳಿಗೆ ಕೃಷ್ಣಭಟ್ಟ ಎನ್ನುವವರಿಗೆ ಕೊಟ್ಟಿರುವುದರಲ್ಲಿಲ್ಲ ಅವ್ಯವಹಾರ ಆಗಿದೆ ಎಂದು ನಾನು ಆಪಾದನೆ ಮಾಡುತ್ತಿದ್ದೇನೆ. ಇದನ್ನು ತನಿಖೆ ಮಾಡಬೇಕು.

ಶ್ರೀ ಎನ್. ಸಂಪಂಗಿ:- ಮಾನ್ಯ ಅಧ್ಯಕ್ಷರೇ, ಇಷ್ಟೇ ಅಲ್ಲ. ಅವರು ಕೊಠಡಿಗಳ ಬಗ್ಗೆ ಹೇಳಿದರು. ಈ ಕೊಠಡಿಗಳಲ್ಲಿ ಎರಡು ಕೊಠಡಿಗಳನ್ನು ಆ ಹೋಟೆಲ್‌ನ್ನು ನಡೆಸುವಂಥವರಿಗೇ ಕೊಟ್ಟು ಬಿಟ್ಟಿದ್ದಾರೆ. ಎರಡು ಸಾವಿರ ರೂಪಾಯಿಗಳಿಗೆ ಬಾಡಿಗೆಗೆ ಕೊಟ್ಟಿರುವುದು ನಿಜವೇ ಹೇಗೆ? ಇನ್ನೊಂದು, ಆಸ್ತಿಯ ವಿವರಗಳನ್ನು ಕೊಟ್ಟಿದ್ದಾರೆ. ತಿರುಪತಿ ಕೆಳಗಡೆ ಇರತಕ್ಕಂಥ ಎಂ.ಜಿ. ರೋಡ್‌ನಲ್ಲಿ ಬಹಳ ಹೈಯೆಸ್ಟ್ ವ್ಯಾಲ್ಯು ಇರತಕ್ಕಂಥ ಛತ್ರಗಳು ನಮ್ಮ ಮಹಾರಾಜರು ದಾನ ಮಾಡಿರತಕ್ಕಂಥ ಸ್ಥಳದಲ್ಲಿದ್ದು, ಈಗ ಛತ್ರವೂ ಇಲ್ಲ, ಏನೂ ಇಲ್ಲ. ಅವು ಕಳಪೆಯಾಗಿ ಬಿದ್ದು ಅನಧಿಕೃತವಾಗಿ ಅವನ್ನು ಉಪಯೋಗಿಸುವಂಥ ಪರಿಸ್ಥಿತಿ ಇವತ್ತು ಬಂದಿರುವಾಗ ತಿರುಪತಿಯಲ್ಲಿರುವ ಕೋಟ್ಯಾಂತರ ರೂಪಾಯಿಗಳ ಬೆಲೆಬಾಳುವ ಈ ಆಸ್ತಿಯನ್ನು ನಾವು ರಕ್ಷಣೆ ಮಾಡುವುದಕ್ಕೆ ಆಗುತ್ತಿಲ್ಲ. ಮೂರನೆಯದು, ಮಹಾರಾಜರು ಬೆಲೆಬಾಳುವ ಆಭರಣಗಳನ್ನು ದೇವಸ್ಥಾನಕ್ಕೆ ಕೊಟ್ಟಿದ್ದಾರೆ. ಇವತ್ತು ದೇವಸ್ಥಾನಕ್ಕೆ ಕೊಟ್ಟಿರತಕ್ಕಂಥ ಆಭರಣಗಳನ್ನು ನಮ್ಮ ಇಲಾಖೆಯವರು ಎಷ್ಟು ಸಾರಿ ಇನ್‌ಸ್ಪೆಕ್ಷನ್ ಮಾಡಿದ್ದಾರೆ? ಇಪ್ಪತ್ತು ವರ್ಷಗಳ ಹಿಂದೆ ಐ.ಎ.ಎಸ್. ಅಧಿಕಾರಿಯಾಗಿದ್ದಂಥ ಕೃಷ್ಣಮೂರ್ತಿಯನ್ನುವವರು ಬಿಟ್ಟರೆ ಇವತ್ತಿನವರೆಗೂ ಈ ಆಭರಣಗಳನ್ನು ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಯಾರೂ ಹೋಗಿಲ್ಲ. ಇವತ್ತು ಟಿಟಿಡಿ ಅವರಿಂದ ನಾವು ಯಾವುದೇ ಹಕ್ಕನ್ನು ಸಂಪಾದಿಸಿಕೊಳ್ಳುವುದಕ್ಕೆ ಹೋಗಿಲ್ಲ. ಕೋಟ್ಯಾಂತರ ರೂಪಾಯಿಗಳ ಬೆಲೆ ಕಟ್ಟಲಾಗದಿರುವಂಥ ಈ ಆಭರಣಗಳನ್ನು ಇನ್‌ಸ್ಪೆಕ್ಷನ್ ಮಾಡುವುದಕ್ಕೆ ನಾವು ಹೋಗಿಲ್ಲ. ಇವತ್ತು ನಾವು ಎಂತಹ ಪರಿಸ್ಥಿತಿಯಲ್ಲಿದ್ದೇವೆಂದರೆ, ಇವತ್ತು ದೇವಸ್ಥಾನಕ್ಕೆ ಕೊಡತಕ್ಕಂಥ ತುಪ್ಪ ಮುಜರಾಯಿ ಇಲಾಖೆಯವರದ್ದು. ದೀಪ ಹೊತ್ತಿಸುವುದಕ್ಕೆ ಪ್ರತಿ ದಿನ ಮುಜರಾಯಿ ಇಲಾಖೆಯಿಂದ 6 ಕೆ.ಜಿ. ತುಪ್ಪವನ್ನು ನಾವು ಕೊಡುತ್ತೇವೆ. ಅದೂ ಸಹ ಇವತ್ತು ಸಾಲದಲ್ಲಿ ನಾವು ಕೊಡುತ್ತಿದ್ದೇವೆ.

ಮುಜರಾಯಿ ಇಲಾಖೆಯ ಬಗ್ಗೆ ನಾಚಿಕೆಯಾಗುವಂತಹ ವಿಚಾರ ಇದೆ. ಇದೆಲ್ಲವನ್ನು ಸಹ ಅವರು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಅಧಿಕಾರಿಗಳು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಶ್ರೀ ವೆಂಕಟರಮಣ ಸ್ವಾಮಿಯ ಕೃಪೆಯಿಂದ ಇವತ್ತು ಅಧ್ಯಕ್ಷರು ಮಾತನಾಡುವುದಕ್ಕೆ ಶುರು ಮಾಡಿದ ತಕ್ಷಣವೇ ಎಲ್ಲಿ ವಿರೋಧಪಕ್ಷದವರು ಬರ ಬರ ಅಂತ ಮಳೆ ಇಲ್ಲ ಅಂತ ಹೇಳುತ್ತಾರೋ, ಅಲೆಲ್ಲಾ ಮರುದಿನವೇ ಮಳೆ ಸುರಿಯುವುದಕ್ಕೆ ಪ್ರಾರಂಭವಾಗಿದೆ. ಆದ್ದರಿಂದ ವೆಂಕಟರಮಣಸ್ವಾಮಿಯ ವಿಚಾರದಲ್ಲಿ ನಾವು ಆಸಕ್ತಿಯನ್ನು ತೋರಿಸಿ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳೇ, ನನಗೆ ತಿಳಿದಮಟ್ಟಿಗೆ ತಿರುಪತಿಗೆ ಹೋಗುವವರೆಲ್ಲರೂ ಮುಳಬಾಗಿನಲ್ಲಿರುವ ಶ್ರೀ ಆಂಜನೇಯ ಸ್ವಾಮಿಯ ದರ್ಶನ ಮಾಡಿಕೊಂಡೇ ಹೋಗುತ್ತಾರೆ. ಚನ್ನಪಟ್ಟಣ, ಮದ್ದೂರು, ಮಂಡ್ಯ ಕಡೆಯಿಂದ ಎಲ್ಲಾ ಹೋಗುತ್ತಾರೆ. ಯಾತ್ರಿಕರು ಬೈದುಕೊಳ್ಳುವುದು ಬೇಡ. ತಾವು ಸ್ವಲ್ಪ ಆ ಕಡೆ ಗಮನ ಕೊಟ್ಟು ಇದಕ್ಕೆ ಏನು ತಕ್ಕ ಶಾಸ್ತಿ ಮಾಡಬೇಕೋ ಮಾಡಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರಾದ ಸಂಪಂಗಿಯವರು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದು ಇಷ್ಟು ದುಸ್ಥಿತಿಗೆ ಏಕೆ ಬಂತು ಎನ್ನತಕ್ಕಂಥಾದ್ದು ನಮಗೆಲ್ಲರಿಗೂ ಬಹಳ ಆಶ್ಚರ್ಯವನ್ನುಂಟು ಮಾಡತಕ್ಕಂಥ ಬೆಳವಣಿಗೆ. ಅಧಿಕಾರಿಗಳನ್ನು ಹಾಕುತ್ತಾರೆ, ಅಧಿಕಾರಿಗಳು ಅಲ್ಲಿಗೆ ಹೋಗುತ್ತಾರೆ, ಅವರು 2-3 ವರ್ಷ ಆದಮೇಲೆ ಪುನಃ ಅಧಿಕಾರಿಗಳು ಆ ಕೆಲಸ ಬಿಟ್ಟು ಬೇರೆ ಕೆಲಸಕ್ಕೆ ಹೋಗುತ್ತಾರೆ. ಅವರ್ಯಾರಲ್ಲೂ ಕೂಡ ಒಂದು ಕಟಿಬದ್ಧತೆ ಕಾಣುವುದಿಲ್ಲ. ಕಮಿಟ್‌ಮೆಂಟ್ ಕಾಣುವುದಿಲ್ಲ. ಅವರಿಗೆ ಅದು ಬಿಟ್ಟು ಬೇರೆ ಇನ್ನೇನೂ ಕೆಲಸ ಇಲ್ಲ. ಒಬ್ಬ ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಅವನು ಮಾಡಬೇಕಾದ ಕೆಲಸ ಏನೂ ಇಲ್ಲ, ಅಲ್ಲಿರತಕ್ಕಂಥ 4-5 ಎಕರೆ ಜಾಗವನ್ನು ಅವರು ಪರಿಶುದ್ಧವಾಗಿಟ್ಟುಕೊಳ್ಳಬೇಕು ಮತ್ತು ಇಲ್ಲಿಂದ ಹೋಗತಕ್ಕಂಥ ಸಹಸ್ರಾರು ಯಾತ್ರಾರ್ಥಿಗಳು ಏನಿದ್ದಾರೆ, ಆ ಯಾತ್ರಾರ್ಥಿಗಳಿಗೆ ಅಟ್‌ಲೀಸ್ಟ್ ಬೇಸಿಕ್ ಅಮಿನಿಟೀಸ್ ಆದರೂ ಕೂಡ ಕಲ್ಪಿಸಿಕೊಡಲಿಕ್ಕೆ ಬೇಕಾದಂತಹ ಒಂದು ಇನ್‌ಫ್ರಾಸ್ಟ್ರಕ್ಚರ್ ವ್ಯವಸ್ಥೆಯನ್ನು ಸಿದ್ಧ ಮಾಡಿಸಬೇಕಾಗಿರುತ್ತದೆ. ಆದರೆ ನಾನು ಈಗಾಗಲೇ ಮುಖ್ಯ ಕಾರ್ಯದರ್ಶಿಯವರಿಗೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ತರಿಸಿ ಮಾನ್ಯ ವಿರೋಧಪಕ್ಷದ ನಾಯಕರು ಮಾಡಿರತಕ್ಕಂಥ ಮತ್ತು ಅವರು ಹೇಳಿರತಕ್ಕಂಥ ಟಿಪ್ಪಣಿ ಮತ್ತು ಮಾನ್ಯ ಸಂಪಂಗಿಯವರು ಹೇಳಿರತಕ್ಕಂಥಾದ್ದು ಮತ್ತು ನಮಗೂ ಆಂಧ್ರ ಪ್ರದೇಶದ ಸರ್ಕಾರಕ್ಕೂ ಯಾವ ಒಂದು ಅಭಿಪ್ರಾಯ ವ್ಯತ್ಯಾಸಗಳು ಇತ್ತು, ಆ ಅಭಿಪ್ರಾಯ ವ್ಯತ್ಯಾಸಗಳನ್ನು ಈಗ ಸರಿಪಡಿಸಿಕೊಂಡಿದ್ದೇವೆ. ಈಗ ಇರತಕ್ಕಂಥಾದ್ದು, to cleanup the whole mess there. It is a mess ಅದನ್ನು ಕ್ಲೀನ್ ಆಫ್ ಮಾಡಬೇಕಾಗುತ್ತದೆ. ಅದಕ್ಕೆ ಮುಖ್ಯ ಕಾರ್ಯದರ್ಶಿಯವರಿಗೆ ನಾವು ಈಗಾಗಲೇ ನಿರ್ದೇಶನ ಕೊಟ್ಟಿದ್ದೇವೆ. We are aware of some of there problems. ನಮಗೆ ಕೆಲವು ಸಮಸ್ಯೆಗಳು ಗೊತ್ತಿವೆ. ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ನಾನು ಅಲ್ಲಿ ಹೋಗಿ ನೋಡಿದಾಗ ಸುಮಾರು 20 ವರ್ಷಗಳಿಂದ ಯಾರೋ

ಎರಡು ರೂಮ್‌ಗಳನ್ನು ಪರ್ಮನೆಂಟ್ ಆಗಿ ಅವರೇ ಬೀಗ ಹಾಕಿ ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ನನಗೆ ಗೊತ್ತಿಲ್ಲ, ಅದು ಹೇಗೆ ಆಯಿತು? ನಾನು ಅಲ್ಲಿ ಇದ್ದಾಗಲೇ ಅವರಿಗೆ ಒಂದು ಸೂಚನೆಯನ್ನು ಕೊಟ್ಟೆ, ಅವರು ಯಾರು ಅತಿಕ್ರಮ ಪ್ರವೇಶ ಮಾಡಿ ಆ ಛತ್ರದಲ್ಲಿ ನಾಲ್ಕಾರು ವರ್ಷಗಳಿಂದ ಇದ್ದಾರೋ ಅವರನ್ನು ಕೂಡಲೇ ಕಾನೂನಿನ ಪ್ರಕಾರ ಕ್ರಮ ಜರುಗಿಸಿ ಹೊರಗಡೆ ಹಾಕಬೇಕು. ಅವರು ಎಷ್ಟೇ ಪ್ರಭಾವಿಯುತ ವ್ಯಕ್ತಿಗಳಾಗಲಿ, ಸಂಸ್ಥೆಗಳಾಗಲಿ ಅವರನ್ನು ಹೊರಗೆ ಹಾಕಬೇಕೆಂದು ಹೇಳಿ ನಾನು ಸೂಚನೆ ಕೊಟ್ಟಿದ್ದೇನೆ. ಮಾನ್ಯ ಸದನಕ್ಕೆ ನಾನು ಈ ಒಂದು ಭರವಸೆಯನ್ನು ಕೊಡುತ್ತೇನೆ, ನಮ್ಮ ಯಾತ್ರಾರ್ಥಿಗಳ ಒಳ್ಳೆಯದಕ್ಕೋಸ್ಕರ ಏನು ನಮ್ಮ ಹಿರಿಯೀಕರು, ಮಹಾರಾಜರ ಕಾಲದಿಂದ ಛತ್ರ ಅಸ್ತಿತ್ವಕ್ಕೆ ಬಂತು, ಅದನ್ನು ಸರಿಯಾದ ರೀತಿಯಲ್ಲಿ ಮತ್ತು ಅಲ್ಲಿ ಹೊಸದೊಂದು ಛತ್ರವನ್ನು ಕಟ್ಟಲಿಕ್ಕೆ ಕೂಡ ಬೇಕಾದಷ್ಟು ಅವಕಾಶಗಳು ಇವೆ, ಇದನ್ನು ಗಮನದಲ್ಲಿಟ್ಟುಕೊಂಡು ಈ ಸದನ ಕೊಟ್ಟಿರತಕ್ಕಂಥ ಮಾರ್ಗದರ್ಶನದ ಚೌಕಟ್ಟಿನಲ್ಲಿ ಕ್ರಮ ಮುಂದುವರಿಸುತ್ತೇವೆ.

ಮೈಸೂರು ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಲಹಾ ಸಮಿತಿಯನ್ನು ನೇಮಕ ಮಾಡುವುದು

71 (644) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ರಾಜ್ಯದಲ್ಲಿ ಹೊಸ ಮುಜರಾಯಿ ಕಾನೂನು ಜಾರಿಗೆ ಬಂದಿದ್ದರೂ ಸಹ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಲಹಾ ಸಮಿತಿಯನ್ನು ಈವರೆಗೂ ನೇಮಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಸಲಹಾ ಸಮಿತಿಯನ್ನು ಎಂದಿನಿಂದ ನೇಮಿಸಲಾಗುವುದು; ಸಲಹಾ ಸಮಿತಿಯಲ್ಲಿ ನೇಮಿಸಲು ಉದ್ದೇಶಿಸಲಾಗಿರುವ ಸದಸ್ಯರ ಸಂಖ್ಯೆ ಎಷ್ಟು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

1. ಹೊಸ ಮುಜರಾಯಿ ಕಾನೂನು ರಾಜ್ಯದಲ್ಲಿ ಇನ್ನು ಜಾರಿಗೆ ಬಂದಿರುವುದಿಲ್ಲ.

ಸಧ್ಯಕ್ಕೆ ಮೈಸೂರು ಜಿಲ್ಲಾಧಿಕಾರಿಗಳು, ಆಡಳಿತಾಧಿಕಾರಿಗಳಾಗಿರುತ್ತಾರೆ.

2. ಹಾಲಿ ಇರುವ ಅಧಿಸೂಚನೆಯನ್ವಯ ಸಲಹಾ ಸಮಿತಿಯನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೇ, ಈ ಚಾಮುಂಡಿ ದೇವಸ್ಥಾನ ಬರತಕ್ಕಂಥಾದ್ದು ನನ್ನ ಕ್ಷೇತ್ರದಲ್ಲಿ. ಚಾಮುಂಡಿ ಕೃಪೆಯಲ್ಲಿ ಬಂದಿರತಕ್ಕಂಥವನು, ಚಾಮುಂಡಿ ಕ್ಷೇತ್ರದ ಹೆಸರಿನಲ್ಲಿರತಕ್ಕಂಥ, ದೇವರ ಹೆಸರಿನಲ್ಲಿರತಕ್ಕಂಥ ಕ್ಷೇತ್ರ ಅಂದರೆ ಚಾಮುಂಡೇಶ್ವರಿ ಒಂದೇ. ಈ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಕಳೆದ ಎರಡೂವರೆ ವರ್ಷಗಳಿಂದ ಸತತವಾಗಿ ನಾವು ಕಾನೂನು ಪಾಸ್ ಮಾಡಿದ್ದರೂ ಸಹ ಸಲಹಾ ಸಮಿತಿಗಳನ್ನು ನೇಮಿಸಿ ಎಂದು ಹೇಳಿ ಮನವಿ ಮಾಡುತ್ತಲೇ ಇದ್ದೇನೆ, ಇದುವರೆಗೂ ಮಾಡದೇ ಇರತಕ್ಕಂಥಾದ್ದಕ್ಕೆ ಕಾರಣ ಏನು